ಅಗ್ನಿಶಾಮಕ ಠಾಣೆಗಳು ತೆರೆಯಲಾಗಿದೆ:-

(1) ಕೂಡ್ಲಿಗಿ - 16-12-96 ರಂದು

(2) ಶಿರಗುಪ್ಪ - 24-12-96 ರಂದು

(3) ಹೂವಿನಹಡಗಲಿ - 10-1-97 ರಂದು

(ಇ) 1997-98ನೇ ಸಾಲಿನಲ್ಲಿ ಹೊಸ ಅಗ್ನಿಶಾಮಕ ಠಾಣೆಗಳನ್ನು ತೆರೆಯುವ ಪ್ರಸ್ತಾವನೆ ಪರಿಶೀಲನೆಗೆ ಬಂದಿಲ್ಲ. ಅದಕ್ಕೆ ಇನ್ನೂ ಕಾಲವಕಾಶವಿದೆ.

ಶ್ರೀ ಅಲ್ಲಂ ವೀರಭದ್ರಪ್ಪ:- ನನ್ನ ಕ್ಷೇತ್ರವಾದ ಕುರುಗೋಡು ಕ್ಷೇತ್ರದಲ್ಲಿ ಬಹಳ ತೊಂದರೆ ಇದ್ದು ಅಲ್ಲಿ ಹೆಚ್ಚು ಭತ್ತ ಜೋಳ ಬೆಳೆಯುತ್ತಾರೆ. ಇದರಿಂದಾಗಿ ಹೆಚ್ಚು ಬೆಂಕಿ ಅನಾಹುತವಾಗುವ ಸಂದರ್ಭ ಇದೆ. ನಮ್ಮ ಕುರುಗೋಡು ತಾಲ್ಲೂಕಿಗೆ ಈ ಬಜೆಟ್ಟಿನಲ್ಲಿ ಒಂದು ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸಬೇಕೆಂದು ವಿನಂತಿಸುತ್ತೇನೆ.

ಶ್ರೀ ವಿ.ಸೋಮಣ್ಣ:- ಬಳ್ಳಾರಿ ಜಿಲ್ಲೆಯಲ್ಲಿ ಅಗ್ನಿಶಾಮಕ ಠಾಣೆಯನ್ನು ಕೊಟ್ಟಿದ್ದೇವೆ. ಆದರೆ ನಿಮ್ಮ ತಾಲ್ಲೂಕಿಗೆ ಕೊಟ್ಟಿಲ್ಲ. ತಮ್ಮ ತಾಲ್ಲೂಕಿನಲ್ಲಿ ಅಗ್ನಿಶಾಮಕ ಠಾಣೆಯನ್ನು ತೆರೆಯುವ ವಿಚಾರ ನಮ್ಮ ಮುಂದೆ ಬಂದಿಲ್ಲ. ಹರಪನಹಳ್ಳಿ ಇತರ ಏಳು ಕಡೆಗಳಲ್ಲಿ ತೆರೆದಿದ್ದೇವೆ. ಇತ್ತೀಚಿನ ದಿನಗಳಲ್ಲಿ ಇನ್ನು ಮೂರು ಅಗ್ನಿಶಾಮಕ ಠಾಣೆಗಳನ್ನು ತೆರೆದಿದ್ದೇವೆ. ಇನ್ನು ಒಂದು ತಾಲ್ಲೂಕಿನಲ್ಲಿ ತೆರೆಯಬೇಕೆಂದು ತಾವು ನನಗೆ ಪತ್ರ ಕಳಿಸಿಕೊಟ್ಟರೆ ಪರಶೀಲನೆ ಮಾಡಿ 1997-98 ರಲ್ಲಿ ಠಾಣೆಯನ್ನು ತೆರೆಯುವ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಅಲ್ಲಂ ವೀರಭದ್ರಪ್ಪ:- ಕಳುಹಿಸಿಕೊಡುತ್ತೇವೆ.

ಚಿಕ್ಕಮಗಳೂರು ನಗರ ಸಭೆ ವ್ಯಾಪ್ತಿಯಲ್ಲಿ ಹರಿಯುವ ಕಾಲುವೆಗಳ ದುರಸ್ತಿ.

65(408.) ಶ್ರೀ ಸಿ.ಆರ್.ಸಗೀರ್ ಅಹಮದ್. (ಚಿಕ್ಕಮಗಳೂರು):

ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಚಿಕ್ಕಮಗಳೂರು ನಗರ ಸಭೆಯ ವ್ಯಾಪ್ತಿಯಲ್ಲಿ ಹರಿಯುವ ಕಾಲುವೆಗಳ ದುರಸ್ತಿಗಾಗಿ ಸರ್ಕಾರಕ್ಕೆ ಬೇಡಿಕೆ ಬಂದಿದೆಯೇ:

(ಆ) ಬೇಡಿಕೆ ಬಂದಿದ್ದಲ್ಲಿ ಸರ್ಕಾರವು ತೆಗೆದು ಕೊಂಡಿರುವ ಕ್ರಮಗಳೇನು?

ಶ್ರೀ ತಿಪ್ಪೇಸ್ವಾಮಿ, (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು.)

(ಅ) ಚಿಕ್ಕಮಗಳೂರು ನಗರ ಸಭೆ ವ್ಯಾಪ್ತಿಯಲ್ಲಿ ಹರಿಯುವ ರಾಮೇಶ್ವರ ಕೆರೆಯ ಕೋಟೆ ನಾಲೆ ಹಾಗೂ ರಾಮನಹಳ್ಳಿ ನಾಲೆ ದುರಸ್ತಿಗಾಗಿ ಬೇಡಿಕೆ ಬಂದಿರುತ್ತದೆ.

(ಆ) ಈ ಕಾಲುವೆಗಳ ದುರಸ್ತಿಗಾಗಿ 96-97ನೇ ಸಾಲಿನಲ್ಲಿ ಯೋಜನೇತರ ಶೀರ್ಷಿಕೆಯಡಿಯಲ್ಲಿ 0.40 ಲಕ್ಷ ರೂ. ಹಾಗೂ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ 0.50 ಲಕ್ಷ ರೂ ಅನುದಾನ ಒದಗಿಸಲಾಗಿದ್ದು, ಈ ಕಾಮಗಾರಿಗಳು ಪ್ರಗತಿಯಲ್ಲಿದೆ.

ಶ್ರೀ ಸಿ. ಆರ್. ಸಗೀರ್ ಅಹಮದ್:– ಈ ಉತ್ತರದಿಂದ ನನಗೆ ಆಶ್ಚರ್ಯವಾಗುತ್ತದೆ. ತಮಗೆ ತಿಳಿದ ಹಾಗೆ ಹಿಂದಿನ ಅಧಿವೇಶನದಲ್ಲೂ ಇದರ ಬಗ್ಗೆ ಪ್ರಶ್ನೆ ಹಾಕಿದ್ದೆ. ಪ್ಲಾನ್‌ನಲ್ಲಿ ಈ ಯೋಜನೆಯನ್ನು ತೆಗೆದುಕೊಳ್ಳುತ್ತೇವೆಂದು 7ನೇ ತಾರೀಖು 96 ರಂದು ಹೇಳಿದ್ದರು. ಇದೇ ಉತ್ತರ 97ನೇ ಸಾಲಿನಲ್ಲಿ ಕೂಡ ಹೇಳುತ್ತಿದ್ದಾರೆ. ಬೇಡಿಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಬಂದಿದೆ ಎಂದು ಹೇಳುತ್ತಾರೆ. ಯೋಜನಾ ಇಲಾಖೆ ಬೇಡಿಕೆಯನ್ನು ಒದಗಿಸಿಕೊಟ್ಟಿದೆ. ಅಂದಾಜು 49.20 ಲಕ್ಷ ರೂ ಎಂದು ಮಾಡಿದ್ದಾರೆ. ನನ್ನ ಕ್ಷೇತ್ರದಲ್ಲಿದ್ದಂತಹ ಸಣ್ಣ ನೀರಾವರಿ ಇಲಾಖಾ ಉಪ ವಿಭಾಗವನ್ನು ಬೇರೆ ಕಡೆಗೆ ವರ್ಗಾವಣೆ ಮಾಡಿದ್ದಾರೆ. ಚಿಕ್ಕಮಗಳೂರಿಗೆ ತರುವ ಬಗ್ಗೆ ಸರಕಾರೀ ಆದೇಶವಾದರೂ ನಮ್ಮ ತಾಲ್ಲೂಕಿಗೆ ಇನ್ನೂ ಬರಲಿಲ್ಲ. ಅಲ್ಲಿ ನಡೆಯುವಂತಹ ಸಣ್ಣ ನೀರಾವರಿ ಇಲಾಖಾ ಕೆಲಸ ಕಾರ್ಯಗಳು ಯಾವ ರೀತಿಯಲ್ಲಿ ನಡೆಯಬೇಕೆಂದು ತಮ್ಮ ಮೂಲಕ ಸರಕಾರವನ್ನು ಕೇಳುತ್ತಿದ್ದೇನೆ.

ಶ್ರೀ ತಿಪ್ಪೇಸ್ವಾಮಿ:– ಮಾನ್ಯ ಸದಸ್ಯರು ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಕಾಲುವೆಗಳು ಹರಿಯುತ್ತಿವೆ. ಅದು ಹರಿಯುವ ಸಂದರ್ಭದಲ್ಲಿ ತಗ್ಗು ಪ್ರದೇಶದಲ್ಲಿ ಮಳೆ ಬಂದಾಗ ಟನಲ್‌ಗೆ ನೀರು ಹೆಚ್ಚು ಬರುತ್ತದೆ. ಸೆಲ್ಫ್ ಆಫ್ ಆಗುತ್ತದೆ ಇದರಿಂದಾಗಿ ನೀರು ಮುಂದೆ ಹರಿಯುವುದಕ್ಕೆ ತೊಂದರೆಯಾಗುತ್ತದೆ ಅದನ್ನು ಬಗೆಹರಿಸಬೇಕೆಂಬ ದೃಷ್ಟಿಯಿಂದ 40,000 ರೂ ಮತ್ತು ಪ್ರಕೃತಿ ವಿಕೋಪದಿಂದ 50,000 ರೂ ಹಣವನ್ನು ಬಿಡುಗಡೆ ಮಾಡಿ ಕೆಲಸ ಕೈಗೆತ್ತಿಕೊಂಡಿದ್ದೇವೆ, ಮಾರ್ಚ್ ತಿಂಗಳಲ್ಲಿ ಇದನ್ನು ಮುಗಿಸಿಕೊಡುತ್ತೇವೆ. ತಮ್ಮ ಸಬ್‌ಡಿವಿಜನ್ ಬದಲಾವಣೆಯಾದಾಗ ನಾನು ಈ ಖಾತೆಯಲ್ಲಿ ಇರಲಿಲ್ಲ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಬೇಡಿಕೆ ಇಟ್ಟಾಗ ಸಚಿವ ಸಂಪುಟದಲ್ಲಿ ತೀರ್ಮಾನ ಮಾಡೋಣವೆಂದು ತಿಳಿಸಿದರು. ಸಚಿವ ಸಂಪುಟದಲ್ಲಿ ತೀರ್ಮಾನ ತೆಗೆದುಕೊಂಡು ಸಬ್‌ಡಿವಿಜನ್ಸ್ ತೆರೆಯುವ ಬಗ್ಗೆ ವಿಚಾರ ಬಂದಾಗ ಮಾನ್ಯ ಸದಸ್ಯರ ಅನಿಸಿಕೆ ಏನು ಇದೆಯೋ ಅದಕ್ಕೆ ಪರಿಹಾರ ಕಂಡು ಹಿಡಿಯುವುದರಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್:– ಮಾನ್ಯ ಮಂತ್ರಿಗಳಿಂದ ಇಂತಹ ಉತ್ತರ ನಿರೀಕ್ಷೆ ಮಾಡಿರಲಿಲ್ಲ. ನಮ್ಮಲ್ಲಿ ಸಣ್ಣ ನೀರಾವರಿ ಇಲಾಖೆಗೆ ಸೇರಿರುವ 3-4 ಕೆರೆಗಳು ಇವೆ. ಅದರಿಂದ ಟನಲ್ ಮೂಲಕ ಜಮೀನುಗಳಿಗೆ ಹೋಗುವ ನೀರು ಇಲ್ಲವೇ ಮಳೆಗಾಲದಲ್ಲಿ ಮಳೆ ಜಾಸ್ತಿಯಾಗಿ ಆ ಕಾಲುವೆಗಳಿಂದ ನೀರು ಬರುವುದೇ ಅಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅದರ ದುರಸ್ತಿಗೆ ಹಣ ಒದಗಿಸಿಕೊಡಬೇಕು. ಉಪ ವಿಭಾಗವನ್ನು

ವರ್ಗಾವಣೆ ಮಾಡಿದ್ದಾರೆ ಸರಕಾರ ಇದನ್ನು ಶಾಸಕರು ಕೊಟ್ಟಂತಹ ಮಾಹಿತಿ ಬೇಡಿಕೆ ಮೇಲೆ ಮಾಡುತ್ತದೆಯೇ ಎಂದು ತಿಳಿಸಬೇಕು. ಇರುವಂತಹ ಉಪ ವಿಭಾಗಗಳನ್ನು ಬದಲಾವಣೆ ಮಾಡುತ್ತೇವೆಂದು ಹೇಳುವುದಾದರೆ ಯಾವ ಆಧಾರದ ಮೇಲೆ ಮಾಡಿದ್ದಾರೆ ಎಂದು ತಿಳಿಸಬೇಕು. ಸರಕಾರ ಇದರ ಬಗ್ಗೆ ತೆಗೆದುಕೊಂಡಿರುವ ನಿರ್ಣಯವೇನು? ಚಿಕ್ಕಮಗಳೂರು ತಾಲ್ಲೂಕಿಗೆ ಎಷ್ಟು ದಿನಗಳಲ್ಲಿ ಸಬ್‌ಡಿವಿಜನ್ ಅದನ್ನು ಒದಗಿಸಿಕೊಡುತ್ತೀರಿ ಎಂಬ ಬಗ್ಗೆ ಮಂತ್ರಿಗಳು ಉತ್ತರ ನೀಡಬೇಕೆಂದು ವಿನಂತಿಸುತ್ತೇನೆ.

ಶ್ರೀ ತಿಪ್ಪೇಸ್ವಾಮಿ:- ಸೆಲ್ಫ್ ಆಫ್ ತೆಗೆಸುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಇನ್ನು ಸಬ್‌ಡಿವಿಜನ್ ಬಗ್ಗೆ ತಾವು ಏನು ಕೇಳಿದ್ದೀರಿ ಇದನ್ನು ಶಾಸಕರ ಆದ್ಯತೆ ಮೇಲೆ ಯಾವ್ಯಾವ ತಾಲ್ಲೂಕುಗಳಲ್ಲಿ ಸಣ್ಣ ನೀರಾವರಿ ಕೆಲಸಗಳು ಹೆಚ್ಚು ಇವೆಯೋ ಅಂಥಾದ್ದನ್ನು ಗಮನದಲ್ಲಿ ಇಟ್ಟುಕೊಂಡು ಮಾಡಿದ್ದೇವೆ. ಶಾಸಕರ ತೀರ್ಮಾನದ ಮೇಲೆ ಸಬ್‌ಡಿವಿಜನ್ ವಿಂಗಡನೆ ಮಾಡಿಲ್ಲ. ಎಲ್ಲಿ ಆದ್ಯತೆ ಇದೆಯೋ ಅಂತಹ ಕಡೆ ಮಾಡಬೇಕೆಂದು ತೀರ್ಮಾನಕ್ಕೆ ಬಂದಿದ್ದೇವೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ನಾನು ಹಿಂದಿನ ಅಧಿವೇಶನದಲ್ಲೂ ಇದೇ ಪ್ರಶ್ನೆ ಕೇಳಿದ್ದೆ ಆಗಲೂ ಉಪ ವಿಭಾಗವನ್ನು ತೆರೆಯುತ್ತೇವೆಂದು ತಿಳಿಸಿದ್ದೀರಿ ಈಗಲೂ ಅದೇ ಉತ್ತರ. ಆದಷ್ಟು ಬೇಗನೆ ತೆರೆಯುತ್ತೇವೆಂದು ತಿಳಿಸುತ್ತಿದ್ದೀರಿ. 6 ತಿಂಗಳಾದರೂ ಆಗಲಿಲ್ಲ. ಯಾವಾಗ ಇದನ್ನು ಪ್ರಾರಂಭ ಮಾಡುತ್ತೀರಿ ಎಂದು ಕೇಳುತ್ತಿದ್ದೇನೆ. ಹೊಸ ಕಾಮಗಾರಿಗಳಿಗೆ ಮತ್ತು ಹಳೆಯ ಕಾಮಗಾರಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ.

ಶ್ರೀ ತಿಪ್ಪೇಸ್ವಾಮಿ:- ಕಳೆದ ಅಧಿವೇಶನದಲ್ಲಿ ಮಾನ್ಯ ಸದಸ್ಯರು ಇದೇ ಪ್ರಶ್ನೆ ಕೇಳಿದ್ದರು ಆದಷ್ಟು ಬೇಗ ಮಾಡಿಕೊಡುತ್ತೇವೆಂದು ಹೇಳಿದ್ದೆ. ಸಚಿವ ಸಂಪುಟದಲ್ಲಿ ಅದನ್ನು ತಂದು ಒಂದು ಹಂತಕ್ಕೆ ಬಂದಿದೆ. ಮಾನ್ಯ ಸದಸ್ಯರ ಅಭಿಪ್ರಾಯವನ್ನು ಕೇವಲ 15 ದಿನ ಅಥವಾ ಒಂದು ತಿಂಗಳಲ್ಲಿ ಮಾಡುತ್ತೇನೆ.

ಶ್ರೀ ಮಾದಪ್ಪ:- ಕಳೆದ ಸಲ ಇದೇ ಪ್ರಶ್ನೆ ಕೇಳಿದಾಗ ಇದೇ ಉತ್ತರ ಕೊಟ್ಟಿದ್ದರು. ಮಡಕೇರಿಗೆ ಕೊಡುತ್ತೇನೆಂದು ಹೇಳಿದ್ದರು ಮತ್ತೆ ಈಗ ಸೋಮವಾರಪೇಟೆಗೆ ಕೊಡುತ್ತೇವೆಂದು ಹೇಳುತ್ತಿದ್ದಾರೆ ಮುಂದೆ ಇದನ್ನೆ ವಿರಾಜಪೇಟೆಗೆ ಕೊಡುತ್ತೇವೆಂದರೂ ಆಶ್ಚರ್ಯ ಇಲ್ಲ. 86 ರಿಂದ ಉಪ ವಿಭಾಗ ಇತ್ತು ಅದನ್ನು ಕಿತ್ತುಕೊಂಡಿದ್ದಾರೆ. ಕೊಡಗು ಜಿಲ್ಲೆಯಲ್ಲಿ ಹೆಚ್ಚು ಮಳೆ ಬರುತ್ತದೆ. ಆದರೆ ಮಳೆ ನಿಂತ ನಂತರ ಕೆಲಸ ನಡೆಯುವುದು ಹೇಗೆ? ಅಲ್ಲಿ ಬೋರ್‌ವೆಲ್‌ಗಳನ್ನು ಹಾಕಿದ್ದೀರಿ ಇದರಿಂದಾಗಿ ಅಲ್ಲಿ ಜಲದ ಮಟ್ಟ ಕಡಿಮೆಯಾಗುತ್ತದೆ. ಇಲ್ಲಿ ಒಂದು ಉಪ ವಿಭಾಗ ಕಟ್ಟಿ ಅದನ್ನು ತಡೆಯುವ ಅವಶ್ಯಕತೆ ಇದೆ. ಮಡಕೇರಿಗೆ ಯಾವಾಗ ಉಪ ವಿಭಾಗವನ್ನು ಕೊಡುತ್ತೀರಿ ಈಗಾಗಲೇ ಒಂದು ವರ್ಷ ತಡವಾಗಿದೆ.

ಅಧ್ಯಕ್ಷರು- ಇವರು ಮೂವರೂ ಕೂತು ಒಂದು ಸೆಟಲ್‌ಮೆಂಟಿಗೆ ಬರುವವರೆಗೆ ತಡೆ ಹಿಡಿಯಿರಿ.

ಶ್ರೀ ತಿಪ್ಪೇಸ್ವಾಮಿ:– ಶಾಸಕರ ಬೇಡಿಕೆ ಆದ್ಯತೆ ಮೇಲೆ ಎಲ್ಲಾ ಪ್ರಮುಖವಾಗಿ ಸಬ್‌ಡಿವಿಜನ್ಸ್ ಮಾಡಬೇಕಾಗುತ್ತದೆ ಅದನ್ನು ಗಮನದಲ್ಲಿಟ್ಟುಕೊಂಡು ಸರಕಾರದ ಕೆಲಸ ಕಾರ್ಯಗಳಿಗೆ ಕುಂದು ಬರದಂತೆ ಎಲ್ಲಾ ಆದ್ಯತೆ ಕೊಡಬೇಕೋ ಅಲ್ಲಿ ಆದ್ಯತೆ ಕೊಟ್ಟು ಕೆಲಸ ಮುಗಿಸಿಕೊಡುತ್ತೇವೆ.

ಶ್ರೀ ಸಿ. ಹೆಚ್. ವಿಜಯ್‌ಶಂಕರ್:– ಇದೇ ಪ್ರಶ್ನೆಯನ್ನು ನಾನು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಕೇಳಿದ್ದೆ. ಅದೇ ಪ್ರಶ್ನೆ ಈ ಸಲವು ಕೇಳಿದ್ದೆ ಆದರೆ ಅದು ಅನ್‌ಸ್ಟಾರ್ಡ್ ಆಗಿದೆ. ಸಣ್ಣ ನೀರಾವರಿ ಅಚ್ಚುಕಟ್ಟು ಎಷ್ಟು ಇದೆ ಅದಕ್ಕೆ ಸೌಲಭ್ಯವನ್ನು ಮುಂದುವರಿಸುತ್ತೇವೆಂದು ಹೇಳಿದ್ದರು. ನನ್ನ ಕ್ಷೇತ್ರದಲ್ಲಿ 30 ರಿಂದ 35 ಸಣ್ಣ ನೀರಾವರಿ ಇದೆ. ಎರಡೂವರೆಯಿಂದ ಮೂರು ಸಾವಿರ ಅಚ್ಚುಕಟ್ಟು ಇದೆ. ಈಗಲೂ ಅಧಿಕಾರಿಗಳು ನಮ್ಮ ಕೈಗೆ ಸಿಗುವುದಿಲ್ಲ. ಇದನ್ನು ಹೆಚ್. ಡಿ. ಕೋಟೆಗೆ ವರ್ಗಾಯಿಸಿದರೆ ನಮ್ಮ ಹಣೆಬರಹ ಏನಾಗುತ್ತದೆ. ನಮ್ಮಲ್ಲಿ ಸಣ್ಣ ನೀರಾವರಿ ಇಲಾಖೆಗೆ ಸಂಬಂಧಪಟ್ಟ ನಮ್ಮಲ್ಲೇ ಮುಂದುವರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದರು. ಆದರೆ ಇದರ ಬಗ್ಗೆ ಇವತ್ತಿನವರೆಗೂ ಕ್ರಮ ತೆಗೆದುಕೊಳ್ಳದಿರುವುದಕ್ಕೆ ಕಾರಣ ಏನು? ಮತ್ತು ಅದನ್ನು ಅಲ್ಲೇ ಮುಂದುವರಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರೋ ಇಲ್ಲವೋ ತಿಳಿಸಬೇಕು. ಎರಡನೆಯದಾಗಿ ನಾನು ಶಾಸಕನಾಗಿ ಎರಡು ವರ್ಷವಾದರೂ ಕೂಡ 95-96 ಮತ್ತು 96-97 ಇವೆರಡೂ ವರ್ಷದಲ್ಲಿ ಒಂದೇ ಒಂದು ಪೈಸೆಯನ್ನೂ ಬಿಡುಗಡೆ ಮಾಡಿಲ್ಲ. ಈ ರೀತಿಯಾದರೆ ನಾನು ಶಾಸಕನಾಗಿ ಕೆಲಸ ಮಾಡುವುದು ಹೇಗೆ? ಅಚ್ಚುಕಟ್ಟಿನ ಹಣೆಬರಹ ಹೇಗೆ ಎಂದು ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ಕೊಡಬೇಕು.

ಶ್ರೀ ತಿಪ್ಪೇಸ್ವಾಮಿ:– ಮಾನ್ಯ ಅಧ್ಯಕ್ಷರೇ, ನಾನು ಈ ಖಾತೆಯನ್ನು ವಹಿಸಿಕೊಂಡಿದ್ದೇ ಬಜೆಟ್ ಆದಮೇಲೆ. ಬಜೆಟ್‌ನಲ್ಲಿ ಇಂಥ ಕೆಲಸಕಾರ್ಯಗಳಿಗೆ ಇಂತಿಷ್ಟು ಹಣ ಎಂದು ಮಂಜೂರಾಗಿತ್ತು. ಮಾನ್ಯ ಸದಸ್ಯರು ಹೇಳುತ್ತಿರುವುದು ಪ್ರಾಮಾಣಿಕವಾಗಿದೆ, ಅದನ್ನು ನಾನು ಒಪ್ಪುತ್ತೇನೆ. ಮುಂದಿನ ಆಯವ್ಯಯದಲ್ಲಿ ಸನ್ಮಾನ್ಯ ಸದಸ್ಯರ ಒಂದು ಅನಿಸಿಕೆಯನ್ನು ನಾನು ಈಡೇರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜ್:– ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿಯೇ ನಾನು ನಿಯೋಗವನ್ನು ಕರೆದುಕೊಂಡು ಬಂದಿದ್ದೆ. ನನಗೂ ದಯವಿಟ್ಟು ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು:– ಪ್ರಶ್ನೆಯನ್ನು ಏತಕ್ಕೆ ಕಳುಹಿಸಿಲ್ಲ?

ಶ್ರೀ ಹೆಚ್.ಡಿ. ಬಸವರಾಜ್:– ಮಾನ್ಯ ವಿಜಯಶಂಕರ್‌ಗೆ ಅವಕಾಶವನ್ನು ಕೊಡುವಾಗ ನನಗೂ ಕೊಡುತ್ತೇನೆಂದು ಹೇಳಿದ್ದಿರಿ. ನನ್ನ ಪ್ರಶ್ನೆ ಒಂದು ಅನ್ ಸ್ಟಾರ್ಡ್ ಆಗಿದೆ.

ಅಧ್ಯಕ್ಷರು:– ಮಾದಪ್ಪ, ಅಪ್ಪಚ್ಚುರಂಜನ್ ಇವರೆಲ್ಲಾ ಕೇಳಿಲ್ಲವೇ? ಈ ರೀತಿ ಮಾಡಿದರೆ ಹೇಗೆ? ರೂಲ್ಸ್ ಪುಸ್ತಕವನ್ನು ಓದುವುದಿಲ್ಲ. ಹೇಳಿದ್ದನ್ನೂ ಕೇಳುವುದಿಲ್ಲ. ಈ ರೀತಿಯಾದರೆ ಅಸೆಂಬ್ಲಿಯಲ್ಲಿ ಕೆಲಸ ಮಾಡುವುದು ಬಹಳ ಕಷ್ಟವಾಗುತ್ತದೆ.

ಶ್ರೀ ಹೆಚ್.ಡಿ. ಬಸವರಾಜ್:– ಮಾನ್ಯ ಅಧ್ಯಕ್ಷರೇ, ಅಲ್ಲಿ ಹೆಚ್ಚುಕಾಮಗಾರಿಗಳನ್ನು

ಮಾಡಬೇಕೆಂದು ಹೇಳುತ್ತಾ ಮತ್ತು ಅಲ್ಲಿನ ಕಾಮಗಾರಿಗಳನ್ನು ಯಾವುದೇ ಉಪವಿಭಾಗದಿಂದ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ತಾವು ಕಛೇರಿಯನ್ನು ಸೋಮವಾರಪೇಟೆಯಲ್ಲಿ ತೆರೆಯುತ್ತೇನೆಂದು ಹೇಳಿರುವುದನ್ನು ನಾನು ಸ್ವಾಗತಿಸುತ್ತೇನೆ. ಇದರ ಜೊತೆಗೆ ಉಪವಿಭಾಗವನ್ನು ಸೋಮವಾರಪೇಟೆಯಲ್ಲಿ ಮತ್ತು ವಿಭಾಗವನ್ನು ಮಡಿಕೇರಿಯಲ್ಲಿ ತೆಗೆದು ವೀರಾಜಪೇಟೆ ಮತ್ತು ಮಡಿಕೇರಿಯ ಉಪವಿಭಾಗದ ಐದು ಕೋಟಿ ರೂಪಾಯಿಗಳ ಕಾಮಗಾರಿಯನ್ನು ಮಾಡಲಿಕ್ಕೆ ಆದ್ಯತೆ ಕೊಡಬೇಕೆಂದು ಹೇಳುತ್ತೇನೆ. ಧನ್ಯವಾದಗಳು.

ಶ್ರೀ ತಿಪ್ಪೇಸ್ವಾಮಿ:- ಮಾನ್ಯ ಸರ್ಕಾರ ಅಭಿಪ್ರಾಯ ಸೂಕ್ತವಾಗಿದೆ. ಅದಕ್ಕೆ ಹೆಚ್ಚಿನ ಗಮನವನ್ನು ಕೊಟ್ಟು ಮಾಡುತ್ತೇನೆ ಎಂದು ಹೇಳುತ್ತೇನೆ.

ಕೊಪ್ಪಳದಲ್ಲಿ ಸಂಚಾರಿ ಪೋಲೀಸ್ ಠಾಣೆ ಪ್ರಾರಂಭ

67(616): ಶ್ರೀ ಕರಡಿ ಸಂಗಣ್ಣ (ಕೊಪ್ಪಳ):

ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಕೊಪ್ಪಳ ನಗರದಲ್ಲಿ ದಿನೇ ದಿನೇ ಸಂಚಾರ ಹೆಚ್ಚುತ್ತಿದ್ದು ಇಲ್ಲಿಗೆ ಸರಕಾರಿ ಆರಕ್ಷಕ ಠಾಣೆಯ ಅವಶ್ಯಕತೆಯ ಬಗ್ಗೆ ಜಿಲ್ಲಾ ಪೋಲೀಸ್ ಅಧಿಕಾರಿಗಳು ಠಾಣೆಯನ್ನು ಮಂಜೂರು ಮಾಡಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿದ್ದರೂ ಸಂಚಾರಿ ಠಾಣೆಯೂ ಈವರೆಗೂ ಮಂಜೂರು ಆಗದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

(ಆ) ಈ ಠಾಣೆಯನ್ನು 1997-98ನೇ ಸಾಲಿಗೆ ಮಂಜೂರು ಮಾಡಿ ಇದೇ ಸಾಲಿಗೆ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಆರ್. ರೋಷನ್ ಬೇಗ್(ಗೃಹ ಮತ್ತು ವಕ್ಫ್ ರಾಜ್ಯ ಸಚಿವರು.)

(ಅ) ಪ್ರಸ್ತಾವನೆ ಇನ್ನೂ ಸರ್ಕಾರಕ್ಕೆ ಸ್ವೀಕೃತವಾಗಿಲ್ಲ.

(ಆ) ಪ್ರಸ್ತಾವನೆ ಬಂದಾಗ ಪರಿಶೀಲಿಸಲಾಗುವುದು.

ಶ್ರೀ ಕರಡಿ ಸಂಗಣ್ಣ:- ಮಾನ್ಯ ಅಧ್ಯಕ್ಷರೇ, ಮಂತ್ರಿಯವರು ಉತ್ತರವನ್ನು ಒದಗಿಸಿದ್ದಾರೆ. ನಾನು ಕಳೆದ ಬಾರಿ ಕೂಡ ಇದೇ ಪ್ರಶ್ನೆಯನ್ನು ಹಾಕಿದ್ದೆ. ಕೊಪ್ಪಳ ನಗರದಲ್ಲಿ ಮುಖ್ಯವಾಗಿ ಹುಬ್ಬಳ್ಳಿ-ರಾಯಚೂರು ರಸ್ತೆಯಾಗಿರುವುದರಿಂದ ದಿನೇ ದಿನೇ ಸಂಚಾರಿ ವ್ಯವಸ್ಥೆ ಹೆಚ್ಚುತ್ತಿರುವುದರಿಂದ ವಾಹನ ಮತ್ತು ಜನಸಂದಣಿ ಹೆಚ್ಚಿದ್ದು ಅಪಘಾತವಾಗುತ್ತಿದ್ದರೂ ಕೂಡ ಸರ್ಕಾರ ಪ್ರಸ್ತಾವನೆ ಇನ್ನೂ ಸರ್ಕಾರಕ್ಕೆ ಸ್ವೀಕೃತವಾಗಿಲ್ಲ ಎಂದು ಉತ್ತರಿಸಿದ್ದಾರೆ.

ಅಧ್ಯಕ್ಷರು:- ಅದು ಇಲಾಖೆಯ ಮುಖಾಂತರ ಬರಬೇಕು.